ಪ್ರಕಟಣೆ

ಅಧ್ಯಕ್ಷರು:– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳ ಪ್ರಯಾಣ ದರದ ಬಗ್ಗೆ ಪರಿಶೀಲಿಸಿ ಸಂಸ್ಥೆಯ ಕಾರ್ಯನಿರ್ವಹಣೆ ಮತ್ತು ಆಡಳಿತ ದಕ್ಷತೆಯ ಬಗ್ಗೆ ಸೂಕ್ತ ಸಲಹೆಗಳನ್ನು ಸರ್ಕಾರಕ್ಕೆ ನೀಡುವ ಸಲುವಾಗಿ ಈ ಕೆಳಕಂಡ 11 ಜನ ವಿಧಾನಸಭಾ ಸದಸ್ಯರುಗಳನ್ನು ಹಾಗೂ 4 ಜನ ವಿಧಾನ ಪರಿಷತ್ ಸದಸ್ಯರುಗಳನ್ನೊಳಗೊಂಡ ಸದನ ಸಮಿತಿಯನ್ನು ನೇಮಕ ಮಾಡಲಾಗಿದೆ.

ಶ್ರೀಯುತರುಗಳಾದ:

1. ಪಿ.ಜಿ.ಆರ್. ಸಿಂಧ್ಯ	–	ಅಧ್ಯಕ್ಷರು
2. ಮಲ್ಲಾರಿಗೌಡ ಎಸ್. ಪಾಟೀಲ್	–	ಸದಸ್ಯರು
3. ಐ.ಎಂ. ಶೆಡ್‌ಶ್ಯಾಲ್	–	,,
4. ಡಿ.ಆರ್. ಪಾಟೀಲ್	–	,,
5. ಜಿ.ಎಸ್. ಆಚಾರ್	–	,,
6. ಡಾ. ನಂಜಪ್ಪ	–	,,
7. ವೆಂಕಟರಮಣಪ್ಪ	–	,,
8. ಡೆರಿಕ್ ಎಫ್ ಫುಲ್‌ನಷ	–	,,
9. ರುಕ್ಮಯ್ಯ ಪೂಜಾರಿ	–	,,
10. ವಾಟಾಳ್ ನಾಗರಾಜ್	–	,,
11. ಹಂಪನಗೌಡ	–	,,

ಈ ಸಮಿತಿಯು ವರದಿಯನ್ನು ಇಂದಿನಿಂದ 3 ತಿಂಗಳ ಒಳಗಾಗಿ ನೀಡುವಂತೆ ಸೂಚಿಸಲಾಗಿದೆ. ವಿಧಾನ ಪರಿಷತ್ತಿನಲ್ಲಿ ವಿಧಾನ ಪರಿಷತ್ತಿನ ಸದಸ್ಯರ ಹೆಸರುಗಳನ್ನು ಮಾನ್ಯ ಸಭಾಪತಿಯವರು ಪ್ರಕಟಿಸುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ:– ಆ ಕಮಿಟಿಯಲ್ಲಿ ಎಸ್.ಜೆ.ಪಿ.ಯ ಬೈರೇಗೌಡರು ಇದ್ದಾರೆ. ಆದರೆ ವೈ.ಕೆ. ರಾಮಯ್ಯನವರ ಹೆಸರು ಸಜಸ್ಟ್ ಮಾಡಿತ್ತು, ಅವರ ಹೆಸರು ಇಲ್ಲ.

ಶ್ರೀ ಸಿ. ಬೈರೇಗೌಡ:– ಅದನ್ನು ಬಿಟ್ಟಿದ್ದೀರಿ, ಅದು ಸರಿಯಾದುದಲ್ಲ. ಅದನ್ನು ಸರಿಪಡಿಸುವಂಥ ಕ್ರಮ ತೆಗೆದುಕೊಳ್ಳಿ.

ಅಧ್ಯಕ್ಷರು:– ಆಯಿತು.

ಖಾಸಗಿ ವಿಧೇಯಕ

1993ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ

(ಮಂಡನೆಗೆ ಅನುಮತಿ ಕೋರಿಕೆ)

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೆ, 1993ನೇ ಸಾಲಿನ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ಸಚಿವರು):– ಮಾನ್ಯ ಅಧ್ಯಕ್ಷರೇ, ಸಾಧಾರಣವಾಗಿ ಯಾವ ವಿಧೇಯಕ ತಂದರೂ ಇಂಟ್ರಡಕ್ಷನ್ ಸ್ಟೇಜ್‌ನಲ್ಲಿ ವಿರೋಧ ಮಾಡತಕ್ಕ

ಸಂಪ್ರದಾಯ ಇಲ್ಲ. ಆದರೆ ಮಾನ್ಯ ಸದಸ್ಯರಿಗೆ ಕೇಳಿಕೊಳ್ಳುವುದು ಏನೆಂದರೆ, ಈಗಿರುವ ಲೋಕಾಯುಕ್ತ ಆಕ್ಟ್‌ನಲ್ಲಿ ಅನೇಕ ಅಂಶಗಳನ್ನು ಪರಿಶೀಲಿಸುತ್ತೇವೆ. ಅದರ ಜೊತೆಗೆ ತಾವು ಹೇಳಿರುವ ಅಂಶಗಳನ್ನು ಪರಿಶೀಲಿಸಿ ಸಮಗ್ರವಾದ ಲೋಕಾಯುಕ್ತ ಆಕ್ಟ್‌ನ್ನು ತರುವ ಯೋಚನೆ ಸರ್ಕಾರಕ್ಕೆ ಇದೆ. ಆದುದರಿಂದ ತಾವು ಒಪ್ಪಿದರೆ ಇದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕಾಗುತ್ತದೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಇದನ್ನು ಎಷ್ಟು ದಿನಗಳೊಳಗೆ ಮಾಡುತ್ತೀರಿ ? ಇದು ಬಹಳ ಮುಖ್ಯವಾದುದು. ಇವತ್ತು ಪತ್ರಿಕೆಯಲ್ಲೂ ಬಂದಿದೆ. ಹಲವಾರು ಸಚಿವರ ಹೆಸರುಗಳನ್ನು ಹಾಕಿರುವುದು ಇವತ್ತು ಬೆಳಗಿನ ಪತ್ರಿಕೆಗಳಲ್ಲಿ ಬಂದಿದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಕ್ರಮ ತೆಗೆದುಕೊಳ್ಳುವುದಕ್ಕೆ ನಿಮ್ಮಲ್ಲಿ ಯಾವ ಅಧಿಕಾರವೂ ಇಲ್ಲ. ಆದಕಾರಣ ಇದು ಸಾರ್ವಜನಿಕರ ಎದುರುಗಡೆ ಅವರಿಗೆ ನಮ್ಮ ಬಗ್ಗೆ ಎಷ್ಟು ವಿಶ್ವಾಸ ಇರಬೇಕೋ ಅದನ್ನು ನಾವು ಉಳಿಸಿಕೊಳ್ಳುವಂಥ ಪ್ರಯತ್ನ ಮಾಡುತ್ತಿಲ್ಲ. ಆ ಕಾರಣ ಸರಳವಾದ ಎರಡು ತಿದ್ದುಪಡಿಗಳನ್ನು ನಾನು ಸಲಹೆ ಮಾಡುತ್ತಿರುವುದು. ಈಗಿರತಕ್ಕ ಲೋಕಾಯುಕ್ತ ಮಸೂದೆಯಲ್ಲಿ ನಾವು ನಮ್ಮ ಆಸ್ತಿ ವಿವರ ಕೊಡದಿದ್ದರೆ 3 ದಿನಪತ್ರಿಕೆಗಳಲ್ಲಿ ನಮ್ಮ ಹೆಸರನ್ನು ಅವರು ಪ್ರಕಟಣೆ ಮಾಡಬೇಕು. ಅಷ್ಟೇ ನಮ್ಮ ಮೇಲೆ ಇರುವ ನಿರ್ಬಂಧ. ನಾವು ಹಾಕಿಕೊಂಡಿರುವುದು. ಅದರ ಬದಲಾಗಿ ನಾನು ಸಲಹೆ ಮಾಡುತ್ತಿರುವುದು, ಪ್ರಮಾಣ ಪತ್ರಿಕೆ ಮೂಲಕ ನಮ್ಮ ಆಸ್ತಿ ವಿವರಗಳನ್ನು ಕಡ್ಡಾಯವಾಗಿ ಸಲ್ಲಿಸಲೇಬೇಕು. ಅದು ಮಾಡದಿದ್ದರೆ ನಾವು ಕಳ್ಳರು ಎಂಬ ಗುಮಾನಿ ಜನರಲ್ಲಿ ಬರುವುದರಿಂದ ಪ್ರಮಾಣ ಪತ್ರಿಕೆ ಮೂಲಕ ಆಸ್ತಿ ವಿವರಗಳನ್ನು ಸಲ್ಲಿಸದಿದ್ದರೆ ತನ್ನಿಂದ ತಾನೇ ಸೆಕ್ಷನ್ 10ರ ಪ್ರಕಾರ ಲೋಕಾಯುಕ್ತ ಮಸೂದೆಯಲ್ಲಿ ಕ್ರಮ ಪ್ರಾರಂಭ ಮಾಡಬೇಕೆಂಬ ಸಣ್ಣ ತಿದ್ದುಪಡಿ ತಂದಿದ್ದೇನೆ. ಆ ಕಾರಣ ಇದನ್ನು ತಕ್ಷಣಕ್ಕೆ ಅಳವಡಿಸಿ ನಾವು ನಮ್ಮ ಮೇಲೆ ನಿರ್ಬಂಧ ಹಾಕಿಕೊಳ್ಳುವುದು ಎಲ್ಲಾ ದೃಷ್ಟಿಯಿಂದ ಒಳ್ಳೆಯದು. ತಾವು ಸಮಗ್ರವಾಗಿ ಅನಂತರ ತಿದ್ದುಪಡಿ ಮಾಡಬಹುದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಸರ್ಕಾರದ ಪರವಾಗಿ ಹೇಳುವುದಾದರೆ ಈ ತರಹ ಪೀಸ್‌ಮೀಲ್ ಅಮೆಂಡ್‌ಮೆಂಟ್ ಮಾಡುವುದಕ್ಕೆ ಸರ್ಕಾರ ಒಪ್ಪುವುದಿಲ್ಲ. ಅವರು ಹೇಳಿರುವ ಉದ್ದೇಶ ಒಳ್ಳೆಯ ಉದ್ದೇಶವಾಗಿದೆ. ಆದರೆ ಈಗ ಇದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಿ. ಇದನ್ನು ಬೇರೆ ಅಂಶಗಳ ಜೊತೆ ಸರ್ಕಾರ ಪರಿಶೀಲನೆ ಮಾಡುತ್ತದೆ. ಬ್ಯಾಕಿ ವಿಚಾರ ಅವರಿಗೆ ಬಿಟ್ಟದ್ದುದು. ಇದು ಸಣ್ಣ ತಿದ್ದುಪಡಿ ಎಂದು ಹೇಳಿದ್ದಾರೆ. ಆದರೆ ವ್ಯಾಪಕವಾಗಿ ಪರಿಣಾಮ ಮಾಡುವಂಥ ತಿದ್ದುಪಡಿ ಇದೆ. ಆದುದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರೊ: ಎಂ.ಡಿ.ನಂಜುಂಡಸ್ವಾಮಿ:– ಇದರ ಜೊತೆಗೆ ಮತ್ತೊಂದು ತಿದ್ದುಪಡಿಯನ್ನು ನಾಳೆ ನಾಡಿದ್ದರಲ್ಲಿ ಕಳುಹಿಸಿಕೊಡುತ್ತೇನೆ. "prior sanction of the Governer" ಎಂದು ಬ್ರಿಟಿಷ್ ಕಾಲದಿಂದ ಉಳಿದುಕೊಂಡು ಬಂದಿದೆ. ಬ್ರಿಟಿಷರು ಈ ದೇಶದಲ್ಲಿ ಆಡಳಿತ ನಡೆಸುತ್ತಿದ್ದಾಗ ಬ್ರಿಟಿಷ್ ಸರ್ವೆಂಟ್ಸ್‌ಗೆ ರಕ್ಷಣೆ ಕೊಡುವುದಕ್ಕೋಸ್ಕರ ಕ್ರಿಮಿನಲ್ ಪ್ರೊಸೀಜರ್‌ನಲ್ಲಿ ಇಟ್ಟುಕೊಂಡಿದ್ದ ಒಂದು ಸೆಕ್ಷನ್. That also has to be removed ಪ್ರತ್ಯೇಕವಾಗಿ ಇನ್ನೊಂದು ಕ್ರಿಮಿನಲ್ ಪ್ರೊಸೀಜರ್ ಕೋಡ್‌ಗೆ ತಿದ್ದುಪಡಿ ಮಸೂದೆ ತರಬೇಕು. even in the absence of this amendment I want this amendment be approved by the entire House unanimously. ಸರ್ವಾನುಮತದಿಂದ ಇದು ಒಪ್ಪಿಗೆ ಆಗಬೇಕು. ಯಾರೇ ಇದನ್ನು ವಿರೋಧ ಮಾಡುವುದಕ್ಕಾಗುವುದಿಲ್ಲ. ಯಾವಾಗ ತರುತ್ತೀರಿ ಎನ್ನುವುದು ಮುಖ್ಯ. I request the Hon'ble Speaker to allow me to move this Bill and take it up for consideration.....

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಯಾವತ್ತು ಎಂದು ಹೇಳುವುದು ಕಷ್ಟ ಅಧ್ಯಕ್ಷರೇ. ಇದರಲ್ಲಿ

ಪರಿಶೀಲಿಸಬೇಕಾದ ಅಂಶಗಳು ಇವೆ. ಆದಷ್ಟು ಬೇಗ ಅದರ ಬಗ್ಗೆ ವಿಚಾರ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೇ, ಲೋಕಾಯುಕ್ತದವರು ಏನು ಮಾಡುತ್ತಾರೆಂದರೆ, ಎರಡು ವರ್ಷ ಕೊಟ್ಟಿದ್ದು ಅವರು ಒಪ್ಪಿಕೊಳ್ಳುತ್ತಾರೆ. ಅದೇ ಅಂಕಿ ಅಂಶಗಳನ್ನು ಮರು ವರ್ಷ ಬದಲಾವಣೆ ಆಗಿದ್ದನ್ನು ಸ್ವಲ್ಪ ಕೊಟ್ಟರೆ ಇದು ಸರಿಯಾಗಿಲ್ಲ ಎಂದು ರಾಜ್ಯಪಾಲರಿಗೆ ಕಳುಹಿಸಿಕೊಟ್ಟಿದ್ದಾರೆ. ನಾನು ಅದರ ಬಗ್ಗೆ ತೀವ್ರ ಪ್ರತಿಭಟನೆ ಮಾಡಿದ್ದೇನೆ. ಆಮೇಲೆ ಅದನ್ನು ಒಪ್ಪಿಕೊಂಡಿದ್ದಾರೆ. ಲೋಕಾಯುಕ್ತ ಕಾಯ್ದೆಯಲ್ಲಿ ಸಾಕಷ್ಟು ಲೋಪದೋಷಗಳು ಇವೆ. ಮಾನ್ಯ ಮಂತ್ರಿಗಳು ಶೀಘ್ರವಾಗಿ ತಿದ್ದುಪಡಿಯನ್ನು ತರುತ್ತೇವೆಂದು ಹೇಳುವಾಗ ಎಷ್ಟು ಬೇಗ ತರುತ್ತೇವೆಂದು ಹೇಳಬೇಕಾಗುತ್ತದೆ. ಶೀಘ್ರ ಎಂದರೆ ಅರ್ಥ ಇಲ್ಲ. ಮಾನ್ಯ ಅಧ್ಯಕ್ಷರೇ, ಜೂನ್ ತಿಂಗಳಲ್ಲಿ ಮತ್ತೆ ಒಂದು ಲೆಕ್ಕವನ್ನು ನಾವು ಕೊಡಬೇಕಾಗಿ ಬರುತ್ತದೆ. ಲೆಕ್ಕ ಕೊಡುವಾಗ ಏನು ಮಾಡಬೇಕು ?

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಒಂದು ಒಪ್ಪಂದಕ್ಕೆ ಬರೋಣಾ ಅಂತಿದ್ದೆ. ಜೂನ್ ತಿಂಗಳಲ್ಲಿ ಮತ್ತೊಂದು ಕೊಡಬೇಕಲ್ಲವೇ ? ಅಷ್ಟರೊಳಗೆ ತಾವು ಇದನ್ನು ಅಳವಡಿಸುತ್ತೇವೆಂದು ಆಶ್ವಾಸನೆ ಕೊಟ್ಟರೆ ನಾನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಆಶ್ವಾಸನೆ ಕೊಡುವುದಕ್ಕೆ ಸಾಧ್ಯವಿಲ್ಲ.

Prof. M.D. NANJUNDA SWAMY:– I will insist Mr. Speaker that this should be taken up for consideration...

ಅಧ್ಯಕ್ಷರು:– ಪ್ರಸ್ತಾವ ಹೀಗಿದೆ "1993ನೇ ಸಾಲಿನ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

ಪ್ರೊ: ಎಂ.ಡಿ.ನಂಜುಂಡಸ್ವಾಮಿ:– ನಾನು ವಿಭಜನೆಗಾಗಿ ಒತ್ತಾಯಿಸುತ್ತೇನೆ.

ಸಭೆಯನ್ನು ವಿಭಜಿಸಲಾಯಿತು.

ಅಧ್ಯಕ್ಷರು:– ವಿಭಜಿಸಿದಾಗ ಫಲಿತಾಂಶ ಹೀಗಿದೆ.

1. ಹೌದು – 14
2. ಇಲ್ಲ – 15

ಸೂಚನೆಯು "ಇಲ್ಲ" ಎನ್ನುವುದರ ಪರವಾಗಿದೆ.

ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು ಮತ್ತು ಅನುಮತಿ ನಿರಾಕರಿಸಲಾಯಿತು

MR. SPEAKER:– Now the House stands adjourned to meet again on 15th March 1993 at 10.00 a.m.

(The House adjourned at forty three minutes past two of the clock to meet again on Monday the 15th March 1993 at 10.00 a.m.)

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣಗಳನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)